# ಜಿಲ್ಲಾಧಿಕಾರಿಗಳ ಕಾರ್ಯಾಲಯ ಉತ್ತರ ಕನ್ನಡ, ಕಾರವಾರ-581 301

**OFFICE OF THE DEPUTY COMMISSIONER, UTTARA KANNADA DISTRICT, KARWAR, -581 301**

ದೂರವಾಣಿ / Telephone: 08382 226406, 226471 / 08382 226603 (Fax)

Email: dckarwar@gmail.com

Website: http://uttara kannada.nic.in


ನಂ. ಕಂಶಾ/ಸಿ.ಎಸ್.ಆರ್./ವಿವ-7/2016-17 ದಿನಾಂಕ : 28 -08-2017

## ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಮಾರಿಕಾಂಬಾ ಪ್ರೌಢಶಾಲೆಗೆ ಮತ್ತು ಹಳಿಯಾಳ ಮತ್ತು ದಾಂಡೇಲಿ ಪದವಿ ಕಾಲೇಜುಗಳಿಗೆ ಅಗತ್ಯವಿರುವ ಡೆಸ್ಕ್-ಬೆಂಚ್ ಗಳನ್ನು ಖರೀದಿಸಲು ಉದ್ದೇಶಿಸಲಾಗಿದೆ. ಕಾರಣ, The Karnataka Transparency in Public Procurements Act, 1999 (as amended by Act 21 of 2001 and 4 of 2003) ಮತ್ತು 27ನೇ ನಿಯಮದಂತೆ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ರವರ ಕಾರ್ಯಾಲಯಕ್ಕೆ ಈ ಕೆಳಕಾಣಿಸಿದ ನಮೂದಿಸಿದ ವಿವರಣೆ ಉಳ್ಳ ಡೆಸ್ಕ್-ಬೆಂಚ್ ಗಳನ್ನು ಪೂರೈಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆನ್ ಲೈನ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಪರಿಶೀಲಿಸಬಹುದಾಗಿದೆ.

| ಕ್ರ. ಸಂ. | ಸಾಮಗ್ರಿಗಳು | ಪಿಠೋಪಕರಣದ ಮಾದರಿ | ದರ (ಜಿ.ಎಸ್.ಟಿ., ಸಾಗಾಣಿಕೆ ವೆಚ್ಚ, ಇತರೆ ಎಲ್ಲ ವೆಚ್ಚ ಸೇರಿ) |
|---|---|---|---|
| 1 | 2 | 3 | |
| 1 | *DESK - BENCHES | 1) LENGTH OF THE BENCH = 43"<br>2) WIDTH OF THE BENCH = 12"<br>3) HEIGHT OF THE BENCH = 18"<br>4) LENGTH OF THE DESK = 43"<br>5) WIDTH OF THE DESK = 18"<br>6) HEIGHT OF THE DESK = 30"<br>7) BENCH STRUCTURE 18 SWG CRC ROUND TUBE 25MM DULY RUST PREVENTED ELECTROSTATIC GREY /IVORY COLOUR COATED 40 MICRONS<br>8) TOP OF DESK PRE-LAMINATED MDF WOOD 18MM BROWN COLOUR<br>9) BOTTOM OF THE BENCH PRE-LAMINATED MDF WOOD 18MM BROWN COLOUR<br>10) BOOK STORAGE RACK 18SWG CRC PLAIN SHEET BOX EPOXY POWDER COATED<br>11) BASE WITH PVC BUSH | |

*ಸೂಚನೆ : ಈ ಮೇಲೆ ಕಾಣಿಸಿದ ಡೆಸ್ಕ್ ಮತ್ತು ಬೆಂಚ್‌ಗಳ ಛಾಯಾ ಪ್ರತಿ ಮತ್ತು ಮಾದರಿ ಡೆಸ್ಕ್ ಬೆಂಚ್ ಈ ಕಚೇರಿಗೆ ಟೆಂಡರ್ ತೆರೆಯುವ ಪೂರ್ವದಲ್ಲಿ ಟೆಂಡರ್ ತೆರೆಯುವ ದಿನಾಂಕ: 12-09-2017 ರಂದು ಬೆಳಗ್ಗೆ 11.00 ಗಂಟೆಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

| ಅಲ್ಪಾವಧಿ ಇ-ಟೆಂಡರ್ ಘಟನಾವಳಿಗಳು | | |
|---|---|---|
| 1 | ಟೆಂಡರ್ ಅಂದಾಜು ಪ್ರಮಾಣ | 150 ಡೆಸ್ಕ್ ಬೆಂಚ್ |
| 2 | ಟೆಂಡರ್ ಅಂದಾಜು ಮೊತ್ತ | 9.25 ಲಕ್ಷ |
| 1 | ಆನ್ ಲೈನ್ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ | ದಿನಾಂಕ: 11-09-2017 ರ ಸಾಯಂಕಾಲ 16.00 ರವರೆಗೆ |
| 2 | ಆನ್ ಲೈನ್ ಟೆಂಡರ್ ತೆರೆಯುವ ಸ್ಥಳ | ಜಿಲ್ಲಾಧಿಕಾರಿ ಉತ್ತರ ಕನ್ನಡರವರ ಕಛೇರಿ ಕಾರವಾರ |
| 3 | ಆನ್ ಲೈನ್ ಟೆಂಡರ್ ತೆರೆಯುವ ದಿನಾಂಕ/ಸಮಯ | ದಿನಾಂಕ: 12-09-2017 ಸಾಯಂಕಾಲ 17.00 ಗಂಟೆಗೆ |
| 4 | ಇ.ಎಂ.ಡಿ.ಮೊತ್ತ | ರೂ. 23,125/-<br>e– payment or NEFT ಮೂಲಕ ಪಾವತಿ ಮಾಡುವುದು |

ಷರತ್ತುಗಳು :

1. **ಸಧ್ಯ ಈ ಟೆಂಡರಿನ ಕನಿಷ್ಠ ಅಂದಾಜು ಮೊತ್ತ 9.25 ಲಕ್ಷಗಳಿರುತ್ತವೆ. ಮುಂದಿನ 6 ತಿಂಗಳಲ್ಲಿ ಗರಿಷ್ಠ 25 ಲಕ್ಷ ಮೊತ್ತದವರೆಗೆ ಹೆಚ್ಚಿನ ಪ್ರಮಾಣದ ಡೆಸ್ಕ್-ಬೆಂಚ್ ಗಳ ಅಗತ್ಯವಿದ್ದಲ್ಲಿ ಸದರಿ ಟೆಂಡರಿನಲ್ಲಿ ನಮೂದಿಸಿದ ದರಕ್ಕೆ ಪೂರೈಸಲು ಬದ್ಧರಿರತಕ್ಕದ್ದು.**
2. ಟೆಂಡರದಾರರು ಈ ಕಛೇರಿಗೆ **ಡೆಸ್ಕ್-ಬೆಂಚ್ ಗಳ ಮಾದರಿ** ಟೆಂಡರ ತೆರೆಯುವ ಪೂರ್ವದಲ್ಲಿ ಟೆಂಡರ್ ತೆರೆಯುವ ದಿನಾಂಕ 12-09-2017 ರಂದು ಬೆಳಿಗ್ಗೆ 11.00 ಗಂಟೆಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಟೆಂಡರ್ ದಾರರು ಪೂರೈಸಿದ ಮಾದರಿ ಡೆಸ್ಕ್ ಬೆಂಚ್ ತಾಂತ್ರಿಕವಾಗಿ ಅನುಮೋದನೆಗೊಂಡರೆ ಮಾತ್ರ ಅವರು ಸಲ್ಲಿಸಿದ ಆರ್ಥಿಕ ಬಿಡ್ ಪರಿಶೀಲಿಸಲಾಗುವುದು. ಈ ಕುರಿತು ಜಿಲ್ಲಾಧಿಕಾರಿ ಉತ್ತರಕನ್ನಡ ರವರು ತೆಗೆದುಕೊಳ್ಳುವ ತೀರ್ಮಾನ ಅಂತಿಮವಾಗಿರುತ್ತದೆ.
3. ಟೆಂಡರದಾರರು ಆಯ್ಕೆಯಾದ ನಂತರ ಸಲ್ಲಿಸಿದ ಮಾದರಿ ಟೆಂಡರ ಪ್ರಕಾರ ಸಾಮಗ್ರಿಗಳನ್ನು ಪೂರೈಕೆ ಆದ ನಂತರ ಈ ಕಚೇರಿಗೆ ಸಲ್ಲಿಸಿದ ಮಾದರಿಯನ್ನು ಒಯ್ಯಬಹುದಾಗಿದೆ.
4. ಟೆಂಡರ್ ದಾರರು ಮೇಲ್ಕಂಡ ಪಿಠೋಪಕರಣದ ದರವನ್ನು ಆನ್ ಲೈನ್ ಮೂಲಕ ಸಲ್ಲಿಸುವಾಗ ಪ್ರತಿಯೊಂದು ಡೆಸ್ಕ್ ಬೆಂಚ್ ಗೆ ನಿಖರವಾದ ದರವನ್ನು ನಮೂದಿಸತಕ್ಕದ್ದು.
5. ಆನ್ ಲೈನ್ ಟೆಂಡರ್ ಅರ್ಜಿಗಳನ್ನು ಈ ಕಾರ್ಯಾಲಯದಲ್ಲಿ ಹಾಜರಿರುವ ಟೆಂಡರುದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ವೆಬ್ ಸೈಟ್ನಲ್ ನಲ್ಲಿ ತೆರಯಲಾಗುವುದು.
6. ಟೆಂಡರ್ ನಲ್ಲಿ ನಮೂದಿಸಿರುವ ದರವು ಎಕ್ಸೈಜ್ ಡ್ಯುಟಿ, ಸಿ.ಎಸ್.ಟಿ., ವ್ಯಾಟ್, ತೆರಿಗೆ, GST, ಸಾಗಾಣಿಕೆ ವೆಚ್ಚ ಇತ್ಯಾದಿ ಎಲ್ಲ ವೆಚ್ಚಗಳನನು ಒಳಗೊಂಡಿರತಕ್ಕದ್ದು. ಇದರ ಹೊರತಾಗಿ ಯಾವುದೇ ರೀತಿಯ ಹೆಚ್ಚಿನ ವೆಚ್ಚವನ್ನು ಈ ಕಚೇರಿಯಿಂದ ಪಾವತಿಸಲಾಗುವುದಿಲ್ಲ
7. ಟೆಂಡರ್ ದಾರರು ಕರ್ನಾಟಕ ತೆರಿಗೆ ಇಲಾಖೆಯ ನೋಂದಣಿ ಪ್ರಮಾಣ ಪತ್ರ ( ವ್ಯಾಟ್) ವೃತ್ತಿ ತೆರಿಗೆ ನೋಂದಣಿ ಪ್ರಮಾಣ ಪತ್ರ, ಸೇವಾ ತೆರಿಗೆ ಇಲಾಖೆಯ ನೋಂದಣಿ ಪತ್ರ, ಟಿನ್ನ ಸಂಖ್ಯೆ/ ಪ್ರಸಕ್ತ ಸಾಲಿನಲ್ಲಿ ನವೀಕರಿಸಿ ಚಾಲ್ತಿಯಲ್ಲಿರುವ ನೋಂದಣಿ ಪತ್ರ, ISO ಪ್ರಮಾಣ ಪತ್ರ, ಆನ್ ಲೈನ್ ಟೆಂಡರ್ ಜೊತೆಗೆ ಸಲ್ಲಿಸತಕ್ಕದ್ದು.

8. ಅಂಗೀಕೃತ ಟೆಂಡರ್ ದಾರರು ಸದರಿ ಪಿಠೋಪಕರಣಗಳನ್ನು ಪೂರೈಸಲು ಈ ಕಾರ್ಯಾಲಯದಿಂದ ಪೂರೈಕೆ ಆದೇಶ (Supply/Purchase Order) ಹೊರಡಿಸಿದ 30 ದಿನದೊಳಗಾಗಿ ಸಾಮಗ್ರಿಗಳನ್ನು ಒಳ್ಳೆಯ ಸ್ಥಿತಿಯಲ್ಲಿ ಪೂರೈಸತಕ್ಕದ್ದು, ಸಾಮ್ರಗಿಗಳನ್ನು ಈ ಕಾರ್ಯಾಲಯದಿಂದ ಮುಂದೆ ಸೂಚಿಸಲಾಗುವ ಸ್ಥಳಕ್ಕೆ ಪೂರೈಕೆ ಮಾಡಬೇಕು.

9. ಪಿಠೋಪಕರಣಗಳನ್ನು ನುರಿತ ಪರಿಣಿತರಿಂದ Third Party ರವರಿಂದ ಪರೀಕ್ಷಿಸಿ, ಪ್ರಮಾಣ ಪತ್ರ ನೀಡಿದ ನಂತರವೇ ಬಿಲ್ಲಿನ ಹಣ ಸಂದಾಯ ಮಾಡಲಾಗುವುದು.

10. ಪೂರೈಸಲಾದ ವಸ್ತುಗಳ ಗುಣಮಟ್ಟ ಸರಿ ಇಲ್ಲದಿದ್ದಲ್ಲಿ ವಸ್ತುಗಳನ್ನು ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದವರು ಹೊಂದಿರುತ್ತಾರೆ. ಇದರಿಂದ ಆಗುವ ಟುಕ್ಸಾನಿಗೆ ಈ ಕಚೇರಿ ಜವಾಬ್ದಾರರಲ್ಲ.

11. ಪೂರೈಸಲಾದ ಪಿಠೋಪಕರಣಗಳ ಕನಿಷ್ಠ 2 ವರ್ಷ ಅವಧಿಯ ಗ್ಯಾರಂಟಿ ಅವಧಿಯನ್ನು ಹೊಂದಿರತಕ್ಕದ್ದು. ಅಲ್ಲಿಯ ತನಕ ಟೆಂಡರ್ ಮೌಲ್ಯದ ಶೇ. 5 ರಷ್ಟು Performance Security Deposit ಸಲ್ಲಿಸತಕ್ಕದ್ದು. ಅವಧಿ ಮುಗಿದ ನಂತರ ಅದನ್ನು ಮರಳಿಸಲಾಗುವುದು.

12. ಸಾಮಗ್ರಿಗಳು ಉತ್ತಮ ಗುಣಮಟ್ಟದ ಕಟ್ಟಿಗೆ ಹಾಗೂ ಕಬ್ಬಿಣ ಹೊಂದಿರತಕ್ಕದ್ದು.

13. ಆನ್ ಲೈನ್ ನಲ್ಲಿ ಸ್ವೀಕೃತವಾಗುವ ಯಾವುದೇ ಟೆಂಡರ್ ಗಳನ್ನು ಒಪ್ಪುವ ಅಥವಾ ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಗಳನ್ನು ತಿರಸ್ಕರಿಸುವ ಅಧಿಕಾರವನ್ನು ಜಿಲ್ಲಾಧಿಕಾರಿ ಉತ್ತರಕನ್ನಡರವರು ಕಾಯ್ದಿರಿಸಿಕೊಂಡಿರುತ್ತಾರೆ.

14. ಮೇಲೆ ನಮೂದಿಸಿದ ದಿನಾಂಕಗಳು ಒಂದು ವೇಳೆ ಸರಕಾರಿ ರಜಾದಿನ ಎಂದು ಘೋಷಣೆಯಾದರೆ ಮರುದಿನದ ಸರ್ಕಾರಿ ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸಲಾಗುವುದು.

15. ಟೆಂಡರ್ ಷರತ್ತುಗಳ ಎಲ್ಲಾ ನಿಬಂಧನೆಗಳಿಗೆ ಒಪ್ಪಿರುವುದರ ಬಗ್ಗೆ ಯಶಸ್ವಿಯಾದ ಟೆಂಡರುದಾರರು ರೂ. 100/- ಛಾಪಾ ಕಾಗದದಲ್ಲಿ ಕರಾರು ಪತ್ರವನ್ನು ಈ ಕಾರ್ಯಲಯಕ್ಕೆ ಬರೆದು ನೀಡತಕ್ಕದ್ದು.

16. ಹೆಚ್ಚಿನ ವಿವರಗಳಿಗಾಗಿ ಈ ಕಾರ್ಯಾಲಯವನ್ನು ಖುದ್ದಾಗಿ ಕಚೇರಿ ವೇಳೆಯಲ್ಲಿ (ಸರಕಾರಿ ರಜಾ ದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ: 08382-226406 (ಜಿಲ್ಲಾಧಿಕಾರಿ ಕಚೇರಿಗೆ) ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ.

- ಸಹಿ ಇದೆ-

(ಎಸ್.ಎಸ್. ನಕುಲ್)

**ಜಿಲ್ಲಾಧಿಕಾರಿ,**

ಉತ್ತರ ಕನ್ನಡ, ಕಾರವಾರ.

ಪ್ರತಿ:-

1. *ಡಿಸ್ಟ್ರಿಕ್ ಇನಫಾರ್ಮೇಟಿಕ್ ಆಫೀಸರ್, ಎನ್.ಐ.ಸಿ. ಜಿಲ್ಲಾ ಪಂಚಾಯತ್ , ಉ.ಕ. ಕಾರವಾರ ಇವರಿಗೆ ಸದರಿ ಪ್ರಕಟಣೆಯನ್ನು* Website Address : http://uttarakannada.nic.in ನಲ್ಲಿ ಅಳವಡಿಸಲು ಹಾಗೂ ಟೆಂಡರ್ ತೆರೆಯುವ ದಿನ/ ಸಮಯದಲ್ಲಿ ಈ ಕಚೇರಿಯಲ್ಲಿ ಹಾಜರ ಇರಲು ತಿಳಿಸಿ ಕಳುಹಿಸಿದೆ.
2. *ಈ ಕಾರ್ಯಾಲಯದ ಸೂಚನಾ ಫಲಕ್ಕೆ.*
3. *ಹೆಚ್ಚಿನ ಪ್ರತಿ.*